ಸಾಕ್ಷಿಯನ್ನು ದಿನಾಂಕ **15-12-2025** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ ಡಿ.ಎಸ್.ಬಿ. ವಕೀಲರಿಂದಃ

ದಾವಾ ಆಸ್ತಿಯ ಸರ್ವೆ ನಂಬ್ರದ ಬಗ್ಗೆ ನನಗೆ ನಿಖರವಾಗಿ ತಿಳಿದಿರುವುದಿಲ್ಲ. ನನ್ನ ಸ್ವಾಧೀನದ ಆಸ್ತಿಯ ಮುಪ್ಪೇರ್ಯ ಗ್ರಾಮದ ಸರ್ವೆ ನಂಬ್ರ 139/4 , 0.66 ಸೆಂಟ್ಸು ಆಗಿರುತ್ತದೆ. ಸರ್ವೆ ನಂಬ್ರ 139/4 ಮೂಲತಃ ನನ್ನ ತಂದೆಯ ಸ್ವಾಧೀನದಲ್ಲಿತ್ತು. ನನ್ನ ತಂದೆಯು ಈಗ ಕಾಲವಾಗಿರುತ್ತಾರೆ. ನಂತರ ನಮ್ಮೊಳಗೆ ವಿಭಾಗ ಪತ್ರವಾಗಿ, ಸದರಿ ಸರ್ವೆ ನಂಬ್ರ 139/4 ನನ್ನ ಹಕ್ಕಿಗೆ ಬಂದಿರುತ್ತದೆ. ನನ್ನ ತಂದೆಗೆ ಮೂರು ಜನ ಮಕ್ಕಳಾಗಿದ್ದು, ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳಿರುತ್ತಾರೆ. ಸರ್ವೆ ನಂಬ್ರ 139/4 ಆಸ್ತಿಯು ನನಗೆ ವಿಭಾಗ ಪತ್ರದ ಮೇರೆಗೆ ಬಂದಿದ್ದು, ಸದರಿ ವಿಭಾಗ ಪತ್ರವು ನನ್ನ ಬಳಿಯಲ್ಲಿರುತ್ತದೆ. ಸದರಿ ವಿಭಾಗ ಪತ್ರದಲ್ಲಿ ನನ್ನ ಪಾಲಿಗೆ ವಿಂಗಡಿಸಿದ ಆಸ್ತಿಯಾದ ಸರ್ವೆ ನಂಬ್ರ 139/4 ರ ಪೂರ್ವಕ್ಕೆ -ನನ್ನ ತಮ್ಮ ಹಾಗೂ ಅಕ್ಕನ ಸ್ವಾಧೀನಕ್ಕೆ ಸೇರಿದ ತೋಟ, ಪಶ್ಚಿಮಕ್ಕೆ- ಸರ್ವೆ ನಂಬ್ರ 139/3ಎ2 ರಲ್ಲಿ ನಮ್ಮ ತೋಟ ಇರುತ್ತದೆ ಎಂದು ನಮೂದಿಸಲಾಗಿದೆ. ಸರ್ವೆ ನಂಬ್ರ 139/3ಎ2 ದಾಖಲೆ ಪತ್ರದ ಪ್ರಕಾರ ಸದರಿ ಆಸ್ತಿಯು ಯಾರ ಹೆಸರಲ್ಲಿರುತ್ತದೆಯೆಂದು ನನಗೆ ತಿಳಿದಿರುವುದಿಲ್ಲ. ಸದರಿ ವಿಭಾಗ ಪತ್ರವನ್ನು ಈ ದಾವೆಯಲ್ಲಿ ನಾನು ಹಾಜರುಪಡಿಸಿರುವುದಿಲ್ಲ, ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ವಾದಿಯು ಈ ದಾವೆಯನ್ನು ದಾವಾ ಎ ಶೆಡ್ಯೂಲು ಆಸ್ತಿಯ ಸ್ವಾಧೀನತೆ ಕೋರಿ ಹೂಡಿದ್ದಾಗಿರುತ್ತದೆ.

2ನೇ ಪ್ರತಿವಾದಿಯು ನನ್ನ ತಮ್ಮ. 2ನೇ ಪ್ರತಿವಾದಿಯು ಈ ದಾವೆಯಲ್ಲಿ ಏನು ಉದಾಹರಣೆಯನ್ನು ಸಲ್ಲಿಸಿದ್ದಾರೆಂದು ನನಗೆ ತಿಳಿದಿರುವುದಿಲ್ಲ. ನನ್ನ ಹಾಗೂ 2 ನೇ ಪ್ರತಿವಾದಿಯ ಸಂಬಂಧ ಚೆನ್ನಾಗಿರುತ್ತದೆ. ನಾನು 2ನೇ ಪ್ರತಿವಾದಿಯ ಮನೆಗೆ ಹೋಗಿ-ಬಂದು ಮಾಡುವುದಿಲ್ಲ. ನಾನು ಈ ದಾವೆಯ ಬಗ್ಗೆ 2ನೇ ಪ್ರತಿವಾದಿಯ ಬಳಿ ಏನನ್ನೂ ವಿಚಾರಿಸಿರುವುದಿಲ್ಲ. ಈ ದಾವೆಯಲ್ಲಿ ವಾದಿಯು ಯಾವೆಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ.

ದಾವಾ ಎ ಶೆಡ್ಯೂಲು ಆಸ್ತಿಯನ್ನು ವಾದಿಯ ತಂದೆಯವರು ಇಬ್ರಾಹಿಂ ಎಂಬವರಿಂದ ಖರೀದಿಸಿದ್ದು, ನಂತರ ಇಬ್ರಾಹಿಂ ರ ಮಕ್ಕಳಿಂದ ವಾದಿಗೆ ಬಂದದ್ದಾಗಿರುತ್ತದೆ. ವಾದಿಯ ತಂದೆಯಿಂದ ವಾದಿಗೆ ದಾನಪತ್ರದ ಮೂಲಕ ಬಂದದ್ದಾಗಿರುತ್ತದೆ. ಸದರಿ ದಾನಪತ್ರವನ್ನು ನಾನು ನೋಡಿರುವುದಿಲ್ಲ. ದಾನಪತ್ರದ ಮೂಲಕ ವಾದಿಗೆ ಎಷ್ಟು ವಿಸ್ತೀರ್ಣದ ಆಸ್ತಿಯು ಬಂದಿರುತ್ತದೆಂದು ನನಗೆ ತಿಳಿದಿರುವುದಿಲ್ಲ. 25 ವರ್ಷಗಳ ಹಿಂದೆ ವಾದಿಯ ತಂದೆಯು ದಾವಾ ಎ ಶೆಡ್ಯೂಲು ಆಸ್ತಿಯನ್ನು ಖರೀದಿಸಿದ್ದಾಗಿರುತ್ತದೆ. ದಾವಾ ಎ ಶೆಡ್ಯೂಲು ಆಸ್ತಿ ಹಾಗೂ ನನ್ನ ಸ್ವಾಧೀನತೆಯಲ್ಲಿರುವ 0.66 ಸೆಂಟ್ಸು ಆಸ್ತಿಯು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಒಂದಕ್ಕೊಂದು ಲಗತ್ತಾಗಿರುತ್ತದೆ. ದಾವಾ ಎ ಶೆಡ್ಯೂಲು ಆಸ್ತಿಯ ಪೂರ್ವಕ್ಕೆ ನನ್ನ ಹಕ್ಕಿನ 0.66 ಸೆಂಟ್ಸು ಆಸ್ತಿಯಿರುತ್ತದೆ.

ವಾದಿಯ ದಾವಾ ಎ ಶೆಡ್ಯೂಲು ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಸದರಿ ಆಸ್ತಿಯು ಗದ್ದೆಯಾಗಿತ್ತು, ನಂತರ ಸದರಿ ಆಸ್ತಿಯಲ್ಲಿ ರಬ್ಬರ್ ಬೆಳೆ ಇದ್ದು, ಈಗ ಅಡಿಕೆ ತೋಟ ಇರುತ್ತದೆ. ದಾವಾ ಎ ಶೆಡ್ಯೂಲು ಆಸ್ತಿಯಲ್ಲಿ ವಾದಿ ಹಾಗೂ ವಾದಿಯ ತಂದೆಯವರು ಸೇರಿ ಸದರಿ ಕೃಷಿಗಳನ್ನು ಮಾಡಿರುತ್ತಾರೆ. ಈಗ ದಾವಾ ಎ ಶೆಡ್ಯೂಲು ಆಸ್ತಿಯಲ್ಲಿರುವ ಅಡಿಕೆ ಸಸಿಗಳಿಗೆ ಈಗ 5-6 ವರ್ಷ ಪ್ರಾಯವಾಗಿರುತ್ತದೆ. ದಾವಾ ಎ ಶೆಡ್ಯೂಲು ಆಸ್ತಿಗೆ ಮೊದಲು 4 ಬದಿಗಳಲ್ಲಿಯೂ ಅಗಳಿನ ಆವರಣ ಇದ್ದು, ಈಗ ಸದರಿ ಆವರಣ ನೆಲಸಮವಾಗಿರುತ್ತದೆ. 5-6 ವರ್ಷದಿಂದ ದಾವಾ ಎ ಶೆಡ್ಯೂಲು ಆಸ್ತಿಯಲ್ಲಿ ಅಡಿಕೆ ಸಸಿಗಳನ್ನು ನೆಡುವ ಸಮಯದಲ್ಲಿ ಮೊದಲು ಇದ್ದ ಅಗಳಿನ ಆವರಣ ನೆಲಸಮವಾಗಿರುತ್ತದೆ.

ನನ್ನ ಸ್ವಾಧೀನದಲ್ಲಿರುವ 0.66 ಸೆಂಟ್ಸು ಆಸ್ತಿಗೆ ಪ್ರತ್ಯೇಕ ಆವರಣ ಇರುವುದಿಲ್ಲ. ದಾವಾ ಎ ಶೆಡ್ಯೂಲು ಹಾಗೂ ನನ್ನ ಸ್ವಾಧೀನವಿರುವ 0.66 ಸೆಂಟ್ಸು ಆಸ್ತಿಯ ನಡುವೆ ನೀರಿನ ಕಣಿ ಇರುತ್ತದೆ. ಸದರಿ ನೀರಿನ ಕಣಿಯು ದಾವಾ ಎ ಶೆಡ್ಯೂಲು ಹಾಗೂ ನನ್ನ ಸ್ವಾಧೀನವಿರುವ 0.66 ಸೆಂಟ್ಸು ಆಸ್ತಿಯ ಗಡಿಯಾಗಿರುತ್ತದೆ. ಸದರಿ ನೀರಿನ ಕಣಿಯ ಪೂರ್ವಕ್ಕೆ - ದಾವಾ ಬಿ ಶೆಡ್ಯೂಲು ಆಸ್ತಿಯಿರುತ್ತದೆ. ಸದರಿ ದಾವಾ ಬಿ ಶೆಡ್ಯೂಲು

ಆಸ್ತಿಯಲ್ಲಿ 40 ವರ್ಷ ಪ್ರಾಯದ ಅಡಿಕೆ ಮರಗಳು ಇರುತ್ತವೆ. ಸದರಿ ಅಡಿಕೆ ಕೃಷಿಯನ್ನು ನಾವೇ ಮಾಡಿರುತ್ತೇವೆ. ದಾವಾ ಬಿ ಶೆಡ್ಯೂಲು ಹಾಗೂ ನನ್ನ ಸ್ವಾಧೀನವಿರುವ 0.66 ಸೆಂಟ್ಸು ಆಸ್ತಿಯಲ್ಲಿ ಅಡಿಕೆ, ತೆಂಗು ಕೃಷಿಗಳು ಇರುತ್ತವೆ. ನನ್ನ ಸ್ವಾಧೀನವಿರುವ 0.66 ಸೆಂಟ್ಸು ಆಸ್ತಿಯು ಪ್ಲಾಟಿಂಗ್ ಆಗಿ ನಕ್ಷೆ ಆಗಿರುತ್ತದೆ. ಸದರಿ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

ನನ್ನ ಸ್ವಾಧೀನವಿರುವ 0.66 ಸೆಂಟ್ಸು ಆಸ್ತಿಯ ಪೂರ್ವಕ್ಕೆ ತಂತಿ ಬೇಲಿಯ ಆವರಣ ಇರುತ್ತದೆ. ಉತ್ತರಕ್ಕೆ – ಅಗಳು ಇರುತ್ತದೆ. ದಕ್ಷಿಣಕ್ಕೆ – ಕಣಿಯ ರೀತಿ ಇರುತ್ತದೆ. ಪಶ್ಚಿಮಕ್ಕೆ – ನೀರ ಕಣಿ ದಾಟಿ ಮುಳ್ಳಿನ ಹಳೆಯ ಮುಳ್ಳಿನ ಬೇಲಿಯ ಆವರಣ ಇರುತ್ತದೆ. ಸದರಿ ಮುಳ್ಳಿನ ಬೇಲಿಯನ್ನು ನನ್ನ ಮಾವನ ಮಕ್ಕಳಾದ ಇಸ್ಮಾಯಿಲ್‌ರವರಿಗೆ ಆಸ್ತಿಯನ್ನು ಮಾರಾಟ ಮಾಡಿದವರು ಹಾಕಿರುತ್ತಾರೆ. ಸದರಿ ಬೇಲಿಯನ್ನು ವಾದಿಯವರೇ ರಿಪೇರಿ ಮಾಡಿಸುತ್ತಾರೆ. ನಾನು ಮೇಲೆ ಹೇಳಿದ ನೀರಿನ ಕಣಿಯು ಕೆಲವು ಭಾಗದಲ್ಲಿ 5 ಫೀಟ್ ಅಗಲ ಹಾಗೂ 5 ಫೀಟ್ ಆಳ ಇರುತ್ತದೆ. ಸದರಿ ನೀರಿನ ಕಣಿಯು 100 ಮೀಟರು ಉದ್ದವಿರುತ್ತದೆ. ಸದರಿ ಮುಳ್ಳಿನ ಬೇಲಿಯನ್ನು ನಾನು ರಿಪೇರಿ ಮಾಡಿದ್ದಿಲ್ಲ. ಸದರಿ ಮುಳ್ಳಿನ ಬೇಲಿಯನ್ನು ಹಾಕುವ ಬಗ್ಗೆ ನಮ್ಮ ತಕರಾರು ಇರಲಿಲ್ಲ.

ನನ್ನ ಹಾಗೂ ವಾದಿಯ ನಡುವೆ ಬೇಲಿಯನ್ನು ಹಾಕುವ ಕುರಿತು ಯಾವುದೇ ತಕರಾರು ಇರಲಿಲ್ಲ. ಈ ಬಗ್ಗೆ ವಾದಿಯು ನನ್ನ ವಿರುದ್ಧ ಪೊಲೀಸು ದೂರನ್ನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನೀಡಿರುವುದಿಲ್ಲ. 2019 ರಲ್ಲಿ ನನ್ನ ಹಾಗೂ ನನ್ನ ಸಹೋದರನ ವಿರುದ್ಧ ವಾದಿಯು ಪೊಲೀಸು ದೂರನ್ನು ನೀಡಿರುವುದಿಲ್ಲ. ವಾದಿಯು ನನ್ನ ವಿರುದ್ಧ ಪೊಲೀಸು ದೂರನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ನೀಡಿರಬಹುದು ಎಂದು ನುಡಿಯುತ್ತಾರೆ. ಆ ಬಗ್ಗೆ ಪೊಲೀಸರು ನನ್ನನ್ನು ತನಿಖೆ ಮಾಡಿರುವುದಿಲ್ಲ.

ನನ್ನ ಹಾಗೂ ವಾದಿಯ ನಡುವೆ ದಾವಾ ಶೆಡ್ಯೂಲು ಆಸ್ತಿಯ ವಿಚಾರವಾಗಿ ತಕರಾರು ಇರುವುದಿಲ್ಲ. ವಾದಿಯ ಹಕ್ಕಿನ ಅಸ್ತಿಯನ್ನು ನಾನು ಒಳಗೆ ಹಾಕಿದ್ದೇನೆಂದು ವಾದಿಯು ಹೇಳಿದ ಬಗ್ಗೆ ಈ ದಾವೆಯನ್ನು ವಾದಿಯು ಹೂಡಿದ ನಂತರವೇ ನನಗೆ ತಿಳಿದು ಬಂದಿರುತ್ತದೆ.

ನನ್ನ ತಂದೆಯ ಹೆಸರು ಕುಂಞಿ ಅಹಮ್ಮದ್ ಎಂದಾಗಿರುತ್ತದೆ. ನನ್ನ ತಂದೆಯವರು ಹೆಬ್ಬೆಟ್ಟಿನ ಸಹಿಯನ್ನು ಹಾಕುವವರಾಗಿದ್ದರು. ನನ್ನ ತಂದೆಯವರು ಮಾಡುವ ವ್ಯವಹಾರದ ಬಗ್ಗೆ ನನಗೆ ತಿಳಿದಿತ್ತು. ವಾದಿಯ ತಂದೆ ಹಾಗೂ ನನ್ನ ತಂದೆಯ ನಡುವೆ ದಾವಾ ಬಿ ಶೆಡ್ಯೂಲು ಆಸ್ತಿಯ ಬಗ್ಗೆ ಕರಾರು ಪತ್ರ ಆದ ಬಗ್ಗೆ ನಿಮಗೆ ತಿಳಿದಿತ್ತಾ ಎಂಬ ಪ್ರಶ್ನೆಗೆ ನನ್ನ ತಂದೆ ಹಾಗೂ ವಾದಿಯ ತಂದೆಯ ನಡುವೆ ಯಾವುದೇ ಕರಾರು ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ರೂ.25,500/- ನ್ನು ವಾದಿಯ ತಂದೆಗೆ ಪಾವತಿಸಿ, ದಾವಾ ಬಿ ಶೆಡ್ಯೂಲು ಆಸ್ತಿಯನ್ನು ಖರೀದಿಸಿರುತ್ತಾರೆಂದರೆ ಸರಿಯಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ನನಗೆ ಇಸಾಕ್ ಸಾಹೇಬ್,ಕೆ.ಪಿ.ಪಳ್ಳಿಕುಂಞಿ, ಅಬ್ದುಲ್ ಗಫೂರ್ ರವರ ಪರಿಚಯ ಇರುತ್ತದೆ. ಇಸಾಕ್ ಸಾಹೇಬ್,ಕೆ.ಪಿ.ಪಳ್ಳಿಕುಂಞಿ, ಅಬ್ದುಲ್ ಗಫೂರ್ ರವರು ದಾವಾ ಬಿ ಶೆಡ್ಯೂಲು ಆಸ್ತಿಯ ವಿರುದ್ಧವಾಗಿ ಹೋಗುವ ಪ್ರಮೇಯ ಇರುವುದಿಲ್ಲ. ಇಸಾಕ್ ಸಾಹೇಬ್,ಕೆ.ಪಿ.ಪಳ್ಳಿಕುಂಞಿ, ಅಬ್ದುಲ್ ಗಫೂರ್ ರವರ ಸಮಕ್ಷಮ ನನ್ನ ತಂದೆಯು ವಾದಿಯ ತಂದೆಗೆ ರೂ.25,500/- ಹಣವನ್ನು ಪಾವತಿಸಿ, ದಾವಾ ಬಿ ಶೆಡ್ಯೂಲು ಆಸ್ತಿಯನ್ನು ಖರೀದಿಸಿರುತ್ತಾರೆಂದರೆ ಸರಿಯಲ್ಲ.

**ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು ಅದರಂತೆ ಅನುಮತಿಸಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ಪ್ರಧಾನ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,ಸುಳ್ಯ.ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ